ಒ ಎಸ್ 20/2022 ಪಿ.ಡಬ್ಲ್ಯೂ 1

ಇಂದು ದಿಃ 19.03.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನನ್ನ ತಂದೆ 95/1 ರಲ್ಲಿ ವಿಭಾಗ ಪತ್ರ ಮಾಡಿದ್ದು ನಂತರ ವಾದಿ ಮತ್ತು ಪ್ರತಿವಾದಿಗಳು ಪ್ರತ್ಯೇಕವಾಗಿರುತ್ತಾರೆ ನಂತರ ಆಸ್ತಿಯು ಕೆ ಐ ಎ ಡಿ ಬಿ ಗೆ ಒತ್ತುವರಿ ಆಯಿತು ಎಂದರೆ ಸರಿ. ನನ್ನ ತಂದೆ 25 ಗುಂ ಜಮೀನಿಗೆ ಸಲ್ಲಿಸಿದ ಅರ್ಜಿಯು ಎಲ್ ಎನ್ ಡಿ ಸಿ ಆರ್ 952/98-99 ಎಂದು ನಮೂದು ಆಗಿತ್ತು ಎಂದರೆ ಸರಿ. 1 ನೇ ಪ್ರತಿವಾದಿ ಸರ್ವೆ ನಂಬರ್ 89 ಕ್ಕೆ 1 ಎ 20 ಗುಂ ಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಅರ್ಜಿಯನ್ನು ನನ್ನ ತಂದೆ ಸಲ್ಲಿಸಿದ್ದರು ಎಂಬ ಬಗ್ಗೆ ದಾಖಲೆಯನ್ನು ಹಾಜರು ಮಾಡಿದ್ದೇನೆ ಆ ದಾಖಲೆ ನಿ ಪಿ 11 ಆಗಿರುತ್ತದೆ. ನಿ ಪಿ 1 ಶಿವುಲಿಂಗು ಅಂದರೆ 1 ನೇ ಪ್ರತಿವಾದಿ ಹೆಸರಿನಲ್ಲಿದೆ ಎಂದರೆ ಸರಿ. ನಿ ಪಿ 11 ನನ್ನ ತಂದೆ ಕೊಟ್ಟ ಅರ್ಜಿಗೆ ನಕ್ಷೆ ತಯಾರಿಸಿ ಎಂದು ಇದೆ ಎಂದರೆ ಅರ್ಜಿಯನ್ನು ನಾನೇ ಕೊಟ್ಟಿದ್ದು. ನಿ ಪಿ 12 ರ ಪ್ರಕ್ರಿಯೆಯು 1 ನೇ ಪ್ರತಿವಾದಿ ಸಲ್ಲಿಸಿದ ಅರ್ಜಿಯ ನಂತರ ನಡೆದಿತ್ತು ಎಂದರೆ ಸರಿಯಲ್ಲ. ನಾನು ಕೊಟ್ಟ ದಾಖಲೆಯಲ್ಲಿ 1 ನೇ ಪ್ರತಿವಾದಿ 30 ವರ್ಷಗಳಿಂದ ಸ್ವಾಧೀನದಲ್ಲಿದ್ದಾರೆ ಎಂದು ನಮೂದು ಇದೆ ಎಂದರೆ ಸರಿಯಲ್ಲ, ನಾವು ಒಟ್ಟಿಗೆ ಇದ್ದೆವು ಎಂದು ಸಾಕ್ಷಿ ನುಡಿಯುತ್ತಾರೆ. ನಾವು ಈಗ 2013 ರವರೆಗೆ ಜೊತೆಯಿದ್ದೆವು ನಂತರ ಜೊತೆಯಲ್ಲಿ ಇಲ್ಲ.

ನಿ ಪಿ 13 ರ ದಾಖಲೆ 1 ನೇ ಪ್ರತಿವಾದಿಗೆ ಆದೇಶವಾದ ದಾಖಲೆ ಎಂದರೆ ಸರಿ. ನಿ ಪಿ 14 ರ ಸಾಗುವಳಿ ಚೀಟಿ ನನ್ನ ಅಣ್ಣನ ಹೆಸರಿನಲ್ಲಿ ಇದೆ ಎಂದರೆ ಸರಿ. ಆಸ್ತಿ ಮಂಜೂರಾದ ನಂತರ ಕಂದಾಯ ಪಾವತಿಯನ್ನು ನನ್ನ ಅಣ್ಣನೇ ಮಾಡಿದ್ದರು ಎಂದರೆ ಸರಿ. ನಿ ಪಿ 16 ನನ್ನ ತಂದೆಯ ಹೆಸರಿಗೆ ಆಸ್ತಿ ಮಂಜೂರಾಗುವಾಗ ಕೊಟ್ಟ ದಾಖಲೆ ಎಂದರೆ ಸರಿ. ನಿ ಪಿ 18-21 ರ ದಾಖಲೆಗಳು ತಹಶೀಲ್ದಾರರ ನಡಾವಳಿಗಳು ಎಂದರೆ ಸರಿ.

ಆಸ್ತಿ ಮಂಜೂರಾದ ನಂತರ 1 ನೇ ಪ್ರತಿವಾದಿ ಕಾನೂನು ಬದ್ಧವಾಗಿ ಕಂದಾಯ ಪಾವತಿ ಮಾಡಿದ್ದಾರೆ ಎಂದರೆ ನನ್ನ ತಂದೆ ಮೃತಪಟ್ಟ ಕಾರಣ ಅವರೇ ಕಂದಾಯ ಪಾವತಿ ಮಾಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಸನಂ 95 ರಲ್ಲಿ ನನ್ನ ತಂದೆ ಮಂಜೂರಾತಿಗೆ ಅರ್ಜಿ ಸಲ್ಲಿಸಿಲ್ಲ. ಕೆ ಐ ಎ ಡಿ ಬಿಯವರು ಪ್ರಾಥಮಿಕ ನೋಟಿಫಿಕೇಶ್ ಮಾಡಿದ ನಂತರ ಹಣ ಪ್ರತಿವಾದಿಗಳಿಗೆ ಹೋಗುತ್ತದೆ ಎಂದು ದುರುದ್ದೇಶದಿಂದ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿ ಪರ ವಕೀಲರಿಂದಃ

ನನಗೆ ದಾವೆಯ ಮಾಹಿತಿ ಗೊತ್ತಿದೆ. ನಾನು 2 ನೇ ಪ್ರತಿವಾದಿಗೆ ದಾವೆ ಸಲ್ಲಿಸುವ ಪೂರ್ವದಲ್ಲಿ ನೋಟಿಸನ್ನು ಕೊಟ್ಟಿದ್ದೇನೆ. ನಾನು ಯಾವುದೇ ನೋಟಿಸು ಕೊಟ್ಟಿಲ್ಲ ಎಂದರೆ ಸರಿಯಲ್ಲ ಮತ್ತು ಕೊಡಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿ ಮೇಲೆ ಯಾವುದೇ ಪರಿಹಾರ ಕೇಳಿಲ್ಲ ಎಂದರೆ ಸರಿ. ನನ್ನ ವಾದಪತ್ರದ 10 ನೇ ಖಂಡಿಕೆಯಲ್ಲಿ ತಿಳಿಸಿದಂತೆ 2 ನೇ ಪ್ರತಿವಾದಿ 1 ನೇ ಪ್ರತಿವಾದಿ ಹೆಸರಿಗೆ ಕಾನೂನುಬಾಹಿರವಾಗಿ ದಿಃ 18.11.2017 ರಂದು ಮಾಡಿದ್ದಾರೆ ಎಂದು ತಿಳಿದ ನಂತರ ನಾನು ಮೇಲಧಿಕಾರಿಗೆ ಮೇಲ್ಮನವಿ ಸಲ್ಲಿಸಿದ್ದೇನಾ ಎಂದರೆ ಸಲ್ಲಿಸಿಲ್ಲ. ನಾನು ಯಾವುದೇ ಮೇಲ್ಮನವಿ ಸಲ್ಲಿಸದ ಕಾರಣ ಕೆ ಐ ಎ ಡಿ ಬಿ ಯವರು ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಭೂಸ್ವಾಧೀನ ಮಾಡಿಕೊಂಡಿದ್ದಾರೆ ಎಂದರೆ ಸರಿ.

3 ನೇ ಪ್ರತಿವಾದಿ ಪರ ವಕೀಲರಿಂದಃ

ಪರಿಹಾರಕೊಡಬಾರದೆಂದು ನಾನು ಕೆ ಐ ಎ ಡಿ ಬಿಯವರನ್ನು 3 ನೇ ಪ್ರತಿವಾದಿಯಾಗಿ ಮಾಡಿದ್ದೇನೆ. ಭೂಸ್ವಾಧೀನದ ಬಗ್ಗೆ ಇರುವ ನೋಟಿಫಿಕೇಶನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ಸರ್ಕಾರಿ ಅಧಿಸೂಚನೆ 1 ನೆ ಪ್ರತಿವಾದಿ ಹೆಸರಿಗೆ ಆಗಿದೆ ಎಂದರೆ ಸರಿ. 1 ನೇ ಪ್ರತಿವಾದಿಯೇ ಅದಕ್ಕೆ ಅಧಿಸೂಚಿತ ಖಾತೆದಾರರು ಎಂದರೆ ನನ್ನ ತಂದೆಯೇ ಖಾತೆದಾರರು ಎಂದು ಸಾಕ್ಷಿ ನುಡಿಯುತ್ತಾರೆ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
sd/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.